ಒಳ್ಳೆಯದು ಎಂದು ಹೇಳಿದ್ದಾರೆ. ಅದೇ ರೀತಿ ಈಚಲು ಮರಗಳಿಂದ ನೀರಾ ತೆಗೆದು ಆಯುರ್ವೇದ ಔಷಧಿಯಂತೆ ಉಪಯೋಗಿಸುವುದು ಒಳ್ಳೆಯದು ಎಂದು ಈಚಲು ಮರಗಳನ್ನು ಉಳಿಸಿದ್ದೀರಿ ಎಂದು ಭಾವಿಸಬಹುದೇ, ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಕೆಲವು ತಯಾರಿಕೆಗಳ ಆವರಗಳನ್ನು ಕುಡಿಯುವುದರಿಂದ ಹೆಂಡವನ್ನು ಕುಡಿಯುವುದಕ್ಕಿಂತಲೂ ಕೆಡಕಾಗುತ್ತದೆ ಎಂದು ಹೇಳಿದೆ. ಅದನ್ನು ಇಲ್ಲಿ ಒಂದು 'ಇನಫರೆನ್ಸ್' ಆಗಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೇ ಪಾನನಿರೋಧ ಜಾರಿಯಲ್ಲಿರುವಂಥ ಪ್ರದೇಶಗಳಲ್ಲಿ ಈಚಲು ಮರಗಳು ಇಲ್ಲದೆ ಇರುವ ಭೂಮಿಯನ್ನು ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಿ ಪಾನನಿರೋಧ ಬಹಳ ವರ್ಷಗಳಿಂದ ಇದೆಯೋ ಅಲ್ಲಿ ಎಕ್ಸೈಸ್ ಭೂಮಿ ಬಹಳ ಕಡಿಮೆ ಇದೆ. ಪಾನನಿರೋಧವಿರತಕ್ಕ ಪ್ರದೇಶಗಳಲ್ಲಿ ಕೂಡ ಕೆಲವು ಕಡೆ ಟಾಡಿ ಟ್ಯಾಪಿಂಗ್‌ಗೆ ಸರ್ಕಾರ ಈಗಾಗಲೇ ಅನುಮತಿ ಇತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೇಂದಿ ವನ ಎಂದು ದಾಖಲೆಯಲ್ಲಿ ಮಾತ್ರ ಉಳಿದಿದೆ. ಅದರಲ್ಲಿ ಒಂದು ಗಿಡವೂ ಇಲ್ಲ. ನನ್ನ ತಾಲ್ಲೂಕಿನಲ್ಲಿ ಆರು ಸಾವಿರ ಎಕರೆ ಸೇಂದಿ ವನಕ್ಕೆ ಸೇರಿದ ಪ್ರದೇಶ ವನ್ನು ಅನಧಿಕೃತವಾಗಿ ಉತ್ತುಕೊಂಡಿದ್ದಾರೆ. ರೆವಿನ್ಯೂ ಮಂತ್ರಿಗಳನ್ನು ಕೇಳಿದಾಗ ಉತ್ತರ ಕೊಟ್ಟರು 18 ಸಾವಿರ ಎಕರೆ ಪ್ರದೇಶದಲ್ಲಿ 6 ಸಾವಿರ ಎಕರೆ ಮಾತ್ರ ಅವರಿಗೆ ಸಂಬಂಧಪಟ್ಟಿರುವುದು ಎಂದು. ಸೇಂದಿ ವನ ಎಂದು ಹೆಸರಿಗೆ ಮಾತ್ರ ಇದ್ದು, ಅದರಲ್ಲಿ ಒಂದು ಮರವೂ ಇಲ್ಲದೆ ಇರುವುದರಿಂದ ಅಂಥ ಜಮೀನನ್ನು ರಿಲೀಸ್ ಮಾಡಿ, ಈಗ ಅದನ್ನು ಯಾರು ದರಖಾಸ್ತು ಹಾಕಿ ಸಾಗುವಳಿ ಮಾಡುತ್ತಿದ್ದಾರೆಯೋ ಅವರಿಗೇ ಅದನ್ನು ಮಂಜೂರು ಮಾಡುತ್ತೀರಾ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಉತ್ತರ ಆಗಲೇ ಹೇಳಿದ್ದೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—'ಡೇಟ್ ರಿಸರ್ವ್' ಎಂದು ಮೈಸೂರು ಸರ್ಕಾರ ದವರು ಮಾಡಿರುವುದು 19ನೆ ಶತಮಾನದಲ್ಲಿ ಯಾವ ಯಾವ ಸರ್ವೆ ನಂಬರಿನಲ್ಲಿ ಸೇಂದಿ ಮರಗಳಿವೆ-ಎಷ್ಟು ಮರಗಳಿವೆ ಎನ್ನುವುದಕ್ಕೆ ಪುನಃ ಸರ್ವೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ಗಮನಿಸಲಾಗುತ್ತದೆ.

———

Cheque System in Payments of Bills.

*Q.—578. Sri S. RUDRAPPA (Kalgi).—

Will the Goverment be pleased to state :—

whether cheque system in payment of bills which is existing in three District Treasuries of Gulbarga, Raichur and Bidar is in vogue in other Districts of State ?

A.—Sri RAMAKRISHNA HEGDE (Minister for Finance).—

Yes, in the State Huzur Treasury, Bangalore.

ಶ್ರೀ ಎಸ್. ರುದ್ರಪ್ಪ.—ಮುಂಬೈ ಕರ್ಣಾಟಕದಲ್ಲಿರುವ ಜಿಲ್ಲಾ ಖಜಾನೆಗಳಲ್ಲಿ ಈ ಪದ್ಧತಿ ಯಾವಾಗ ಜಾರಿಯಲ್ಲಿ ಬಂದಿತು ?

ಶ್ರೀ ರಾಮಕೃಷ್ಣ ಹೆಗಡೆ.—ಮುಂಬೈ ಕರ್ಣಾಟಕದಲ್ಲಿ ಜಾರಿಗೆ ಬಂದಿಲ್ಲ.

ಶ್ರೀ ಎಸ್. ರುದ್ರಪ್ಪ.—ಹಾಗಾದರೆ ಯೂನಿಫಾರಂ ಪದ್ಧತಿಯನ್ನು ತರಲಿಕ್ಕೆ ಸರ್ಕಾರ ಯೋಚನೆ ತಳೆದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಯೂನಿಫಾರಂ ಪದ್ಧತಿಯನ್ನು ತರಬೇಕು ಎನ್ನುವುದು ಸರ್ಕಾರದ ಉದ್ದೇಶ. ಅದನ್ನು ಒಮ್ಮೆಗೇ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಸಿಬ್ಬಂದಿ ಮತ್ತು ಇತರ ಅನುಕೂಲತೆಗಳನ್ನು ಒದಗಿಸಿಕೊಂಡಂತೆ ಆ ಪದ್ಧತಿಯನ್ನು ಜಾರಿಗೆ ತರುತ್ತೇವೆ.

ಶ್ರೀ ಸಂಜೀವನಾಥ ಐಕಳ.—ಚೆಕ್ ಕೊಡುವ ಪದ್ಧತಿಯಿಂದ ಅನುಕೂಲವಿದ್ದರೆ ಇತರ ಕಡೆಗಳಲ್ಲಿ ಕೂಡ ಅದನ್ನು ಕೂಡಲೆ ಜಾರಿಗೆ ತಂದು ವರ್ಷದ ಕೊನೆಯಲ್ಲಿ, ಮಾರ್ಚ್ ತಿಂಗಳು 29, 30, 31 ತಾರೀಖುಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಸಾಲಿಗಟ್ಟಲೆ ಜನ ಸೇರಿಕೊಂಡು, 30ನೆ ತಾರೀಖು ಸರ್ಕಾರದಿಂದ ಪಾಸಾದ ಆರ್ಡರ್ ಪ್ರಕಾರ ಬಿಲ್‌ಗಳನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಆಗತಕ್ಕ ಅನೇಕಾನೇಕ ತೊಂದರೆಗಳನ್ನು ತಪ್ಪಿಸಲು ಚೆಕ್ ಪದ್ಧತಿಯನ್ನು ಜಾರಿಗೆ ತಂದರೆ ಒಳ್ಳೆಯದಾಗುವುದಿಲ್ಲವೆ ?

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ ಮಾನ್ಯ ಸದಸ್ಯರು ತಪ್ಪು ಗ್ರಹಿಕೆ ಮಾಡಿದ್ದಾರೆ.

Sri SANJEEVANATH AIKALA.—Instead of the present system of presenting Bills with counter-signature, the Cheque system will be more helpful and easy.

Sri RAMAKRISHNA HEGDE.—That has been introduced in the Bangalore State Huzur Treasury recently. The question of introducing in other areas also is under the consideration of the Government. That will be done gradually.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ನಾನು 545ನೆಯ ಪ್ರಶ್ನೆಯಲ್ಲಿ ಮಾಗಡಿ ತಾಲ್ಲೂಕಿನ ಎಲ್ಲ ಹೋಬಳಿಗಳಿಗೂ ಸಂಬಂಧಪಟ್ಟ ವಿವರಗಳನ್ನು ಕೇಳಿದ್ದೆ. ಮಾನ್ಯ ಮಂತ್ರಿಗಳು ಮಾಗಡಿ ತಾಲ್ಲೂಕಿನ 5 ಹೋಬಳಿಗಳ ವಿಷಯ ಮಾತ್ರ ಕೊಟ್ಟಿದ್ದಾರೆ. ಉಳಿದ ಹೋಬಳಿಗಳ ಉತ್ತರ ಬರುವವರೆಗೂ ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಕಷ್ಟವಾಗುತ್ತದೆ, ಸ್ವಾಮಿ.

ಶ್ರೀ ಜೆ. ಬಿ. ಶಂಕರರಾವ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು ಪಾರ್ಲಿಯಮೆಂಟರಿ ಕಾರ್ಯದರ್ಶಿ).—ತರೀಕೆರೆ ಹೋಬಳಿಗೆ ಸಂಬಂಧಪಟ್ಟ ಉತ್ತರ ಬಿಟ್ಟು ಹೋಗಿದೆ. ಅದನ್ನು ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ.—ನಾನು ಪ್ರಶ್ನೆ ಕೇಳಿದ್ದ ಉದ್ದೇಶ ಮುಖ್ಯವಾಗಿ ನಾನು ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದೆ...

Mr. SPEAKER.—The chair is not concerned with that. If the Member wants that the question should be held over. I shall do so, so that the question may be taken up 2 days or three days later. Anyway now the question is held over.

Annual Increments to First Grade Stenographers Working in Mysore Government Secretariat

*Q.—592. Sri B. M. PATIL (Tikota).—

Will the Government be pleased to state :—

(*a*) whether annual increments are being sanctioned regularly to all the First Grade Stenographers working in the Mysore Government Secretariat ;

(*b*) whether it is a fact that Departmental examinations have not been prescribed for the Secretariat Stenographers for earning increments ;

(*c*) if so, whether the Government would immediately grant annual increments accrued to Stenographers ?